ಪಶು ಆಸ್ಪತ್ರೆ ತೆರೆಯುವುದು

244(470); ಶ್ರೀ ಶ್ರೀನಿವಾಸ್ ಜಿ.ಎಚ್. (ತರೀಕೆರೆ)

ಅ) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ಮತಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಎಂ.ಸಿ. ಹಳ್ಳಿಯು ತರೀಕೆರೆಯಿಂದ 10 ಕಿ.ಮೀ ದೂರದಲ್ಲಿದ್ದು, ಜಾನುವಾರುಗಳ ತಪಾಸಣೆಗೆ ಹತ್ತಿರವಿರುವ ತರೀಕೆರೆ ಪಟ್ಟಣ ಪಶು ಆಸ್ಪತ್ರೆಗೆ ಬರಬೇಕಿರುವುದರಿಂದ ಎಂ.ಸಿ. ಹಳ್ಳಿಯಲ್ಲಿಯೇ ಪಶು ಚಿಕಿತ್ಸಾ ಆಸ್ಪತ್ರೆಯನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಹಾಗಿದ್ದಲ್ಲಿ, ಈ ಪಶು ಚಿಕಿತ್ಸಾ ಆಸ್ಪತ್ರೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶು ಸಂಗೋಪನೆ ಸಚಿವರು.)

ಅ) ಹೌದು.

ಆ) ರಾಜ್ಯದಲ್ಲಿ 100 ಹೊಸ ಪಶುಚಿಕಿತ್ಸಾಲಯಗಳನ್ನು ತೆರೆಯಲು ಉದ್ದೇಶಿಸಲಾಗಿದ್ದು, ಗ್ರಾಮಗಳನ್ನು ಗುರುತಿಸುವ ಕಾರ್ಯ ಪರಿಶೀಲನೆಯಲ್ಲಿದ್ದು ಅರ್ಹತೆ ಆಧಾರದ ಮೇಲೆ ಪರಿಶೀಲಿಸಲಾಗುವುದು.

ಬಸ್ ನಿಲ್ದಾಣಗಳು ಹಾಗೂ ಈಜುಕೊಳಗಳು

245(2482); ಶ್ರೀ ಬಸವರಾಜ್ ಬಿ.ಎ. (ಕೆ.ಆರ್. ಪುರಂ)

ಅ) ಕೆ.ಆರ್.ಪುರಂ ಕ್ಷೇತ್ರದಾದ್ಯಂತ ಎಲ್ಲಾ ಬಸ್ ನಿಲ್ದಾಣಗಳಲ್ಲಿ ತಂಗುದಾಣಗಳಿವೆಯೇ; ಹಾಗಿದ್ದಲ್ಲಿ, ತಂಗುದಾಣ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆಯೇ; ಹಾಗಿದ್ದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕೈಗೊಂಡ ಕ್ರಮವೇನು;

ಆ) ಇದರಲ್ಲಿ ಬೆಂಗಳೂರು ಬೃಹತ್ ನಗರ ಪಾಲಿಕೆ ನಿರ್ಮಿತ ಬಸ್ ತಂಗುದಾಣಗಳೆಷ್ಟು; ಖಾಸಗಿ ನಿರ್ಮಿತ ಬಸ್ ತಂಗುದಾಣಗಳೆಷ್ಟು;

ಇ) ಕೆ.ಆರ್.ಪುರ ಕ್ಷೇತ್ರದಾದ್ಯಂತ ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ನಿರ್ಮಿತ ಈಜುಕೊಳಗಳಿದೆಯೇ; ಇಲ್ಲದಿದ್ದಲ್ಲಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆಯೇ; (ವಿವರ ನೀಡುವುದು);

ಈ) ಈ ಈಜುಕೊಳಗಳನ್ನು ಎಲ್ಲೆಲ್ಲಿ ನಿರ್ಮಿಸಲಾಗುವುದು; (ವಿವರ ನೀಡುವುದು)?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ಕೆ.ಆರ್. ಪುರಂ ಕ್ಷೇತ್ರದಲ್ಲಿ ಒಟ್ಟು 18 ಬಸ್ ನಿಲ್ದಾಣಗಳಿದ್ದು, ಇವುಗಳ ಪೈಕಿ 06 ಬಸ್ ನಿಲ್ದಾಣಗಳಲ್ಲಿ ಮಾತ್ರ ತಂಗುದಾಣಗಳು ಇರುತ್ತದೆ.

ಕೆ.ಆರ್.ಪುರಂ ಕ್ಷೇತ್ರದಾದ್ಯಂತ ಇರುವ ಬಸ್ ತಂಗುದಾಣವನ್ನು ಪಬ್ಲಿಕ್ ಪ್ರೈವೇಟ್ ಪಾರ್ಟ್ನರ್‌ಶಿಪ್ (ಪಿ.ಪಿ.ಪಿ) ಮಾದರಿ ಅಡಿಯಲ್ಲಿ, ಸುಮಾರು 15 ಸ್ಥಳಗಳಲ್ಲಿ ಹೊಸದಾಗಿ ನಿರ್ಮಿಸಲು ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಸದರಿ ಸ್ಥಳಗಳಲ್ಲಿ ಬಸ್ ತಂಗುದಾಣಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಕೆ.ಆರ್. ಪುರಂ ಕ್ಷೇತ್ರದಲ್ಲಿ ಪಾಲಿಕೆಯ ವತಿಯಿಂದ 2 ಬಸ್ ತಂಗುದಾಣಗಳನ್ನು ಶಾಸಕರ 2011–12ನೇ ಸಾಲಿನ ಅನುದಾನದಡಿಯಲ್ಲಿ ನಿರ್ಮಿಸಲಾಗಿರುತ್ತದೆ.

ಖಾಸಗಿ ನಿರ್ಮಿತ ಬಸ್ ತಂಗುದಾಣಗಳಿಗೆ ಯಾವುದೇ ಅನುಮತಿಯನ್ನು ನೀಡಿರುವುದಿಲ್ಲ. ಪ್ಯಾಕೇಜ್ ಮುಖಾಂತರ ಎರಡು ಜಾಹೀರಾತು ಏಜೆನ್ಸಿದಾರರಿಗೆ ನಾಲ್ಕು ಬಸ್ ತಂಗುದಾಣಗಳನ್ನು ನಿರ್ಮಿಸಲು ಟೆಂಡರ್ ಮೂಲಕ ಅನುಮತಿ ನೀಡಿ ನಿರ್ಮಿಸಲಾಗಿದೆ.

ಇ) ಇಲ್ಲ.

ಮೊದಲು ಅಭಿವೃದ್ಧಿ ಕಾರ್ಯಗಳಿಗೆ ಆಧ್ಯತೆ ನೀಡಲಾಗುವುದು. ನಂತರ, ಕೆ.ಆರ್. ಪುರಂ ಕ್ಷೇತ್ರದಲ್ಲಿ ಬರುವ ಪಾಲಿಕೆಯ ವ್ಯಾಪ್ತಿಯಲ್ಲಿ ಲಭ್ಯವಿರುವ ಸೂಕ್ತ ಜಾಗಗಳನ್ನು ಪರಿಶೀಲಿಸಿ ಪಾಲಿಕೆಯ ಅನುದಾನ ಲಭ್ಯತೆಯ ಆಧಾರದ ಮೇಲೆ ಈಜುಕೊಳವನ್ನು ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಈ) ಈಜುಕೊಳಗಳನ್ನು ನಿರ್ಮಿಸುವ ಪ್ರಸ್ತಾವನೆಯು ಸದ್ಯಕ್ಕೆ ಇರುವುದಿಲ್ಲ.

ಅತ್ಯಾಚಾರ ಪ್ರಕರಣಗಳು

246(3654); ಶ್ರೀ ಮಾನಪ್ಪ ಡಿ. ವಜ್ಜಲ್ (ಲಿಂಗಸುಗೂರು)

ಅ) ರಾಯಚೂರು ಜಿಲ್ಲೆಯಲ್ಲಿ 2013 ಮತ್ತು 2014ನೇ ಸಾಲಿನಿಂದ ಈವರೆವಿಗೂ ಪ್ರಾಪ್ತ/ಅಪ್ರಾಪ್ತಬಾಲಕಿಯರು ಹಾಗೂ ಮಹಿಳೆಯರ ಮೇಲೆ ಲೈಗಿಂಕ ದೌರ್ಜನ್ಯ ಹಾಗೂ ಅತ್ಯಾಚಾರವೆಸಗಿರುವ ಪ್ರಕರಣಗಳು ಎಷ್ಟು; (ಕ್ಷೇತ್ರವಾರು ಸಂಪೂರ್ಣ ವಿವರ ನೀಡುವುದು).

ಆ) ಈವರೆಗೆ ಎಷ್ಟು ಪ್ರಕರಣಗಳಿಗೆ ನ್ಯಾಯ ದೊರಕಿಸಿಕೊಡಲಾಗಿದೆ, ಬಾಕಿ ಇರುವ ಪ್ರಕರಣಗಳ ಬಗ್ಗೆ ಕೈಗೊಂಡಿರುವ ಕ್ರಮಗಳೇನು? (ಕ್ಷೇತ್ರವಾರು ಸಂಪೂರ್ಣ ವಿವರ ನೀಡುವುದು)

ಇ) ಹಾಗಿದ್ದಲ್ಲಿ, ಅತ್ಯಾಚಾರಕೊಳ್ಳಗಾದ ಕುಟುಂಬಗಳಿಗೆ ಸರ್ಕಾರದಿಂದ ಪರಿಹಾರವನ್ನು ಘೋಷಿಸಲಾಗಿದೆಯೇ; (ವಿವರ ನೀಡುವುದು)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ರಾಯಚೂರು ಜಿಲ್ಲೆಯಲ್ಲಿ 2013 ಮತ್ತು 2014ನೇ ಸಾಲಿನಿಂದ ಈವರೆವಿಗೂ ಪ್ರಾಪ್ತ/ಅಪ್ರಾಪ್ತಬಾಲಕಿಯರು ಹಾಗೂ ಮಹಿಳೆಯರ ಮೇಲೆ ಲೈಗಿಂಕ ದೌರ್ಜನ್ಯ ಹಾಗೂ ಅತ್ಯಾಚಾರವೆಸಗಿರುವ ಪ್ರಕರಣಗಳು 71. ವಿವರಗಳು ಈ ಕೆಳಕಂಡಂತಿವೆ.